# ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ (ಯು.ಡಿ.ಐ.ಡಿ.)

1. **ಯು.ಡಿ.ಐ.ಡಿ. ಅಂದರೆ ಏನು?**

   ಯು.ಡಿ.ಐ.ಡಿ. ಯೋಜನೆಯು ವಿಕಲಚೇತನರಿಗೆ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ನೀಡುವ ವ್ಯವಸ್ಥೆಯಾಗಿದ್ದು. ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

2. **ಯು.ಡಿ.ಐ.ಡಿ. ಕಾರ್ಡ್ ಪಡೆಯಲು ಯಾರು ನೋಂದಾಯಿಸಬಹುದು?**

   i. ಈಗಾಗಲೇ ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಹೊಂದಿರುವ ವಿಕಲಚೇತನ ವ್ಯಕ್ತಿಗಳು.

   ii. ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಹೊಂದಿಲ್ಲದ ವಿಕಲಚೇತನ ವ್ಯಕ್ತಿಗಳು.

   iii. ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸಿದ ವಿಕಲಚೇತನ ವ್ಯಕ್ತಿಗಳು ಹಾಗೂ ಪ್ರಮಾಣ ಪತ್ರಗಳನ್ನು ಪಡೆಯಲು ಪ್ರಕ್ರಿಯೆ ಜಾರಿಯಲ್ಲಿರುವವರು.

   iv. ಅಂಗವೈಕಲ್ಯತೆ ಹೊಂದಿರುವ ವಿಕಲಚೇತನ ವ್ಯಕ್ತಿಗಳ ಪ್ರಮಾಣಪತ್ರವು ತಾತ್ಕಾಲಿಕವಾಗಿದ್ದು, ಮರು-ಮೌಲ್ಯಮಾಪನದ ಅಗತ್ಯವಿರುತ್ತದೆ.

   v. ಅಂಗವೈಕಲ್ಯತೆ ಹೊಂದಿರುವ ವಿಕಲಚೇತನ ವ್ಯಕ್ತಿಗಳ ಅರ್ಜಿಯು ತಿರಸ್ಕೃತವಾಗಿದ್ದು/ಅಂಗವೈಕಲ್ಯ ಪ್ರಮಾಣ ಪತ್ರವನ್ನು ಪಡೆಯಲು ಮರು ಅರ್ಜಿ ಸಲ್ಲಿಸಲು ಬಯಸುವವರು ಮತ್ತು ಅಂಗವೈಕಲ್ಯತೆಯ ಶೇಕಡಾವಾರು ಪ್ರಮಾಣವನ್ನು ಪಡೆಯಲು ಮರು-ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದವರು.

3. **ಯು.ಡಿ.ಐ.ಡಿ. ಕಾರ್ಡ್ ಪಡೆಯಲು ನೋಂದಣಿ ಪ್ರಕ್ರಿಯೆ ಏನು?**

   ಅಂತರ್ಜಾಲದ ವೆಬ್ ಪುಟವಾದ www.swavlambancard.gov.in ನ ಲಿಂಕ್ ಅನ್ನು ಕ್ಲಿಕ್ ಮಾಡುವುದರ ಮೂಲಕ ಆನ್‌ಲೈನ್ ಮೂಲಕನೊಂದಣಿ ಮಾಡಬಹುದು.

4. **ಈಗಾಗಲೇ ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಹೊಂದಿರುವ ವಿಕಲಚೇತನ ವ್ಯಕ್ತಿಗಳು ಯು.ಡಿ.ಐ.ಡಿ. ಕಾರ್ಡ್ ಪಡೆಯಲು ನೋಂದಣಿ ಮಾಡಬೇಕೇ?**

   ಹೌದು, ಈಗಾಗಲೇ ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಹೊಂದಿರುವ ವಿಕಲಚೇತನ ವ್ಯಕ್ತಿಗಳು ಯು.ಡಿ.ಐ.ಡಿ. ಕಾರ್ಡ್ ಪಡೆಯಲು ನೋಂದಾಯಿಸಿಕೊಳ್ಳಬೇಕಾಗುತ್ತದೆ.

5. **ಯು.ಡಿ.ಐ.ಡಿ. ಕಾರ್ಡ್ ಪಡೆಯಲು ನೋಂದಾಯಿಸುವಲ್ಲಿನ ಲಾಭಗಳು ಏನು?**

   i. ಯು.ಡಿ.ಐ.ಡಿ. ಕಾರ್ಡ್ ವಿಕಲಚೇತನ ವ್ಯಕ್ತಿಗಳ ಗುರುತು, ಅಂಗವೈಕಲ್ಯತೆಯ ಪ್ರಮಾಣ ಹಾಗೂ ಎಲ್ಲಾ ಅಗತ್ಯ ವಿವರಗಳನ್ನು ದಾಖಲಿಸಿಕೊಳ್ಳುತ್ತದೆ. ಅಂಗವೈಕಲ್ಯತೆಯ ವಿವರಗಳನ್ನು ಇ-ರೀಡರ್ ಸಹಾಯದಿಂದ ಡಿಕೋಡ್ ಮಾಡಬಹುದು ಆದುದರಿಂದ ವಿಕಲಚೇತನ ವ್ಯಕ್ತಿಗಳು ಎಲ್ಲಾ ದಾಖಲೆಗಳನ್ನು ಒದಗಿಸುವ ಅಗತ್ಯವಿರುವುದಿಲ್ಲ.

   ii. ಯು.ಡಿ.ಐ.ಡಿ. ಕಾರ್ಡ್ ಭಾರತದಾದ್ಯಂತ ವಿಕಲಚೇತನ ವ್ಯಕ್ತಿಗಳ ಅಂಗವೈಕಲ್ಯತೆಯ ಪುರಾವೆಯಾಗಿ ಪರಿಗಣಿಸಲಾಗುತ್ತದೆ.

   iii. ಯು.ಡಿ.ಐ.ಡಿ. ಕಾರ್ಡ್ ವಿಕಲಚೇತನ ವ್ಯಕ್ತಿಗಳ ಗುರುತಿನ ಏಕೈಕ ದಾಖಲೆಯಾಗಿರುತ್ತದೆ, ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನವನ್ನು ಈ ಕಾರ್ಡ್‌ನ ಮೂಲಕ ಪಡೆದುಕೊಳ್ಳಬಹುದಾಗಿದೆ.

   iv. ಯು.ಡಿ.ಐ.ಡಿ. ಕಾರ್ಡ್‌ನ ಸಹಾಯದಿಂದ ಎಲ್ಲಾ ಹಂತಗಳಲ್ಲಿ ಸುವ್ಯವಸ್ಥಿತವಾಗಿ ಫಲಾನುಭವಿಗಳ ದೈಹಿಕ ಮತ್ತು ಆರ್ಥಿಕ ಪ್ರಗತಿಗಳನ್ನು ಟ್ರ್ಯಾಕ್ ಮಾಡಬಹುದಾಗಿದೆ.

6. **ಫಲಾನುಭವಿಗಳಿಗೆ ತಾವು ಯು.ಡಿ.ಐ.ಡಿ. ಕಾರ್ಡ್ ಪಡೆಯಲು ಯಶಸ್ವಿಯಾಗಿ ನೋಂದಾಯಿತರಾಗಿದ್ದಾರೆಂದು ಹೇಗೆ ತಿಳಿಯುವುದು?**

   ಯು.ಡಿ.ಐ.ಡಿ. ಕಾರ್ಡ್ ಪಡೆಯಲು ಯಶಸ್ವಿಯಾಗಿ ನೋಂದಾಯಿಸಿಕೊಂಡ ಫಲಾನುಭವಿಗಳಿಗೆ ನೊಂದಣಿಯ ದೃಢೀಕರಣ ಸಂಖ್ಯೆಯ ಸಂದೇಶವು ಮೊಬೈಲ್ ಸಂಖ್ಯೆಗೆ ರವಾನೆ ಆಗುತ್ತದೆ.

7. **ಯು.ಡಿ.ಐ.ಡಿ. ಕಾರ್ಡ್ ಫಲಾನುಭವಿಗಳಿಗೆ ಹೇಗೆ ತಲುಪುತ್ತದೆ?**

   ಯು.ಡಿ.ಐ.ಡಿ. ಕಾರ್ಡ್ ಫಲಾನುಭವಿಗಳು ತಾವು ಆನ್‌ಲೈನ್ ಮೂಲಕ ನೋಂದಣಿ ಮಾಡಿದ ಸಮಯದಲ್ಲಿ ನೀಡಿದ ವಿಳಾಸಕ್ಕೆ ಅಂಚೆಯ ಮುಖಾಂತರ ತಲುಪಿಸಲಾಗುವುದು.

8. **ಯು.ಡಿ.ಐ.ಡಿ. ಕಾರ್ಡ್ ನೀಡುವಲ್ಲಿ ಮುಖ್ಯ ವೈದ್ಯಾಧಿಕಾರಿಗಳ (CMO) ಪಾತ್ರವೇನು?**

   ಮುಖ್ಯ ವೈದ್ಯಾಧಿಕಾರಿಗಳಿಗೆ ಯು.ಡಿ.ಐ.ಡಿ. ಕಾರ್ಡ್ ನೀಡುವ ಅಧಿಕಾರವಿರುತ್ತದೆ. ಯು.ಡಿ.ಐ.ಡಿ. ಕಾರ್ಡ್ ಅನ್ನು ನೀಡುವ/ ತಿರಸ್ಕರಿಸುವ ಅಂತಿಮ ನಿರ್ಣಾಯಕರಾಗಿರುತ್ತಾರೆ ಹಾಗೂ ಮುಖ್ಯ ವೈದ್ಯಾಧಿಕಾರಿಗಳ ಸಹಿ ಯು.ಡಿ.ಐ.ಡಿ. ಕಾರ್ಡ್‌ನಲ್ಲಿ ಇರುತ್ತದೆ.

## ಯು.ಡಿ.ಐ.ಡಿ. ಕಾರ್ಡ್ ಪಡೆಯಲು ನೋಂದಣಿ ಮಾಡಿಕೊಳ್ಳಲು ಪಾಲಿಸಬೇಕಾದ ವಿಧಾನಗಳು

❖ ನೋಂದಣಿ

ಅಂತರ್ಜಾಲದ ವೆಬ್ ಪುಟವಾದ www.swavlambancard.gov.in ನ ಲಿಂಕ್ ಅನ್ನು ಕ್ಲಿಕ್ ಮಾಡುವುದರ ಮೂಲಕ ಆನ್‌ಲೈನ್ ಮೂಲಕ ನೋಂದಣಿ ಮಾಡಬಹುದು.

**ನೋಂದಣಿ ಪ್ರಕ್ರಿಯೆಗೆ ಬೇಕಿರುವ ಅಗತ್ಯ ದಾಖಲೆಗಳು**

➢ **ವೈಯಕ್ತಿಕ ವಿವರಗಳು**

- ಸ್ಕ್ಯಾನ್ ಮಾಡಲಾದ ಪಾಸ್‌ಪೋರ್ಟ್ ಫೋಟೋ jpeg / jpg / gif / png [15KB-30KB]
- ಸ್ಕ್ಯಾನ್ ಮಾಡಲಾದ ಸಹಿ /ಹೆಬ್ಬೆರಳು ಗುರುತಿನ ಪ್ರತಿ jpeg / jpg / gif / png [15KB-30KB]

➢ **ವಿಳಾಸದ ಪುರಾವೆ** ಸ್ಕ್ಯಾನ್ ಮಾಡಲಾದ ಪ್ರತಿಗಳು jpeg / jpg / gif / png [15KB-30KB]

- ಸ್ಕ್ಯಾನ್ ಮಾಡಲಾದ ಆಧಾರ್ ಕಾರ್ಡ್/ ಡ್ರೈವಿಂಗ್ ಲೈಸೆನ್ಸ್ /ಪಾಸ್‌ಪೋರ್ಟ್/ ರೇಷನ್ ಕಾರ್ಡ್ / ವೋಟರ್ ಐಡಿ / ಇತರೆ(ಡೋಮಿಸಿಲ್ ಪ್ರಮಾಣಪತ್ರ)

**ಗಮನಿಸಿ: ನಮೂದಿಸಿದ ವಿಳಾಸದ ಪುರಾವೆ ಅಪ್ಲೋಡ್ ಮಾಡಲಾದ ಪ್ರತಿಯೊಂದಿಗೆ ಹೊಂದಿಕೆಯಾಗಬೇಕು.**

➢ **ಈಗಾಗಲೇ ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಹೊಂದಿರುವ ವಿಕಲಚೇತನ ವ್ಯಕ್ತಿಗಳು**

- ಈಗಾಗಲೇ ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಹೊಂದಿರುವ ವಿಕಲಚೇತನ ವ್ಯಕ್ತಿಗಳು ಅಂಗವೈಕಲ್ಯತೆಯ ಪ್ರಮಾಣ ಪತ್ರವನ್ನು ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡಬೇಕು (jpeg/jpg/gif/ png/pdf [10KB-100KB])

➢ **ಗುರುತಿನ ವಿವರಗಳು**

- ಸ್ಕ್ಯಾನ್ ಮಾಡಲಾದ ಆಧಾರ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ ಪ್ಯಾನ್ ಕಾರ್ಡ್/ರೇಷನ್ ಕಾರ್ಡ್/ವೋಟರ್ ಐಡಿ

➢ **ಯು.ಡಿ.ಐ.ಡಿ. ಕಾರ್ಡ್ ಟ್ರ್ಯಾಕ್ ಮಾಡುವುದು ಹೇಗೆ?**

ಫಲಾನುಭವಿಗಳು ನೋಂದಣಿ ಮಾಡಿಕೊಂಡ ಅರ್ಜಿಯನ್ನು ಡೌನ್ಲೋಡ್ ಮಾಡಿಕೊಳ್ಳಬೇಕು ಹಾಗೂ ಫಲಾನುಭವಿಗಳು ಅರ್ಜಿ ಸಲ್ಲಿಸುವ ವೇಳೆಯಲ್ಲಿ ನೊಂದಾಯಿಸಿದ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸಕ್ಕೆ ಸಂದೇಶವು ರವಾನೆ ಆಗುವುದು.